# ಕ್ರೀಡೆಗಳು

## ಹಾಕಿ

ಹಾಕಿ ಭಾರತದ ರಾಷ್ಟ್ರೀಯ ಕ್ರೀಡೆ. ಕ್ರಿಕೆಟ್ ಜನಪ್ರಿಯಗೊಳ್ಳುವ ಮುನ್ನ ಹಾಕಿ ರಾಷ್ಟ್ರದಲ್ಲಿ ನಂ.1 ಕ್ರೀಡೆಯಾಗಿತ್ತು. ಈ ಕ್ರೀಡೆಯಲ್ಲಿ 8 ಬಾರಿ ಒಲಿಂಪಿಕ್ಸ್ ಚಿನ್ನ ಗೆದ್ದಿರುವುದು ಭಾರತದ ಹಿರಿಮೆ.

**ಆಟದ ಸ್ವರೂಪ:**
ಹಾಕಿ ಎರಡು ತಂಡಗಳ ನಡುವಿನ ಕ್ರೀಡೆ. ಇದರಲ್ಲಿ ಉಭಯ ತಂಡಗಳು ಗಟ್ಟಿಯಾದ ಸಣ್ಣ ಚೆಂಡನ್ನು ಕೋಲಿನ ನೆರವಿನಿಂದ ಎದುರಾಳಿಯ ನೆಟ್ ಅಥವಾ ಗೋಲುಪೆಟ್ಟಿಗೆಯೊಳಕ್ಕೆ ತಳ್ಳಲು ಯತ್ನ ನಡೆಸುತ್ತವೆ.

**ವಿಧಗಳು:**
ಹಾಕಿಯಲ್ಲಿ ಹಲವು ವಿಧ. ಫೀಲ್ಡ್ ಹಾಕಿ, ಐಸ್ ಹಾಕಿ, ರೋಲರ್ ಹಾಕಿ, ಸ್ಟ್ರೀಟ್ ಹಾಕಿ, ಇತ್ಯಾದಿ. ಫೀಲ್ಡ್ ಹಾಕಿಯನ್ನು ಸಹಜ ಹಸಿರು ಹುಲ್ಲಿನ ಅಂಕಣ ಅಥವಾ ಕೃತಕ ಟರ್ಫ್ ಮೇಲೆ ಆಡಲಾಗುತ್ತದೆ. ಇದು ವಿಶ್ವದ ಹಲವು ಭಾಗಗಳಲ್ಲಿ ಪುರುಷರು ಹಾಗೂ ಮಹಿಳೆಯರ ತಂಡ ಕ್ರೀಡೆಯಾಗಿ ಪ್ರಸಿದ್ಧ. ವಿಶೇಷವಾಗಿ ಯುರೋಪ್, ಏಷ್ಯಾ, ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಜನಪ್ರಿಯ ಕ್ರೀಡೆ.

ಅಂತಾರಾಷ್ಟ್ರೀಯ ಹಾಕಿ ಒಕ್ಕೂಟ (ಎಫ್ಐಎಚ್) ಹಾಕಿಯ ವಿಶ್ವ ಆಡಳಿತ ಸಂಸ್ಥೆ. ಪುರುಷರ ಹಾಕಿ 1908ರಿಂದ (1912 ಮತ್ತು 1924 ಹೊರತು ಪಡಿಸಿ) ಒಲಿಂಪಿಕ್ಸ್ ಕ್ರೀಡೆಗಳ ಭಾಗವಾಗಿದೆ. ಮಹಿಳಾ ಹಾಕಿ 1980ರಿಂದ ಒಲಿಂಪಿಕ್ಸ್ ನಲ್ಲಿ ಸ್ಥಾನ ಪಡೆದಿದೆ.

ಆಧುನಿಕ ಹಾಕಿ ಕೋಲು ಜೆ ಆಕಾರದಲ್ಲಿರುತ್ತದೆ. ಇದನ್ನು ಮರ, ಗ್ಲಾಸ್ ಫೈಬರ್ ಅಥವಾ ಕಾರ್ಬನ್ ಫೈಬರ್ (ಕೆಲವೊಮ್ಮೆ ಎರಡೂ) ನಿಂದ ತಯಾರಿಸಲಾಗುತ್ತದೆ. ಈ ಕೋಲು ಚೆಂಡನ್ನು ಹೊಡೆಯುವ ಭಾಗದಲ್ಲಿ ಅರ್ಧ ಚಂದ್ರಾಕೃತಿಯಲ್ಲಿ ಭಾಗಿರುತ್ತದೆ.

**ಇತಿಹಾಸ:**
ಇತಿಹಾಸದ ಪುರಾವೆಗಳ ಪ್ರಕಾರ ಹಾಕಿಯ ಕಚ್ಚಾ ಮಾದರಿಯನ್ನು ಈಜಿಪ್ಟ್ ನಲ್ಲಿ 4000 ವರ್ಷಗಳ ಹಿಂದೆ ಹಾಗು ಇತಿಯೋಪಿಯದಲ್ಲಿ ಕ್ರಿಸ್ತ ಪೂರ್ವ 1000ದ ಸುಮಾರಿಗೆ ಆಡಲಾಗುತ್ತಿತ್ತು. ರೋಮನ್ನರು, ಗ್ರೀಕರು ಮತ್ತು ಕೊಲಂಬಸ್ ಆಗಮಿಸುವುದಕ್ಕೆ ಹಲವು ಶತಮಾನಗಳ ಮುಂಚೆಯೇ ದಕ್ಷಿಣ ಅಮೆರಿಕದಲ್ಲಿ ಈ ಕ್ರೀಡೆ ಆಡಲಾಗುತ್ತಿತ್ತು ಎನ್ನುವುದಕ್ಕೆ ಹಲವು ಪುರಾವೆಗಳು ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ದೊರಕುತ್ತವೆ. ಆದರೆ, ಆಧುನಿಕ ಹಾಕಿ ಅರಳಿದ್ದು 18ನೇ ಶತಮಾನದ ಮಧ್ಯಭಾಗದಲ್ಲಿ ಇಂಗ್ಲೆಂಡಿನಲ್ಲಿ. ಅದರಲ್ಲೂ ಮುಖ್ಯವಾಗಿ ಶಾಲೆಗಳಲ್ಲಿ. ಮೊದಲ ಹಾಕಿ ಕ್ಲಬ್ 1849ರಲ್ಲಿ ವಾಯುವ್ಯ ಲಂಡನ್ನಿನ ಬ್ಲಾಕ್ ಹೀತ್ ನಲ್ಲಿ ಪ್ರಾರಂಭವಾಯಿತು. ಹಾಕಿ ಭಾರತದಂತೆಯೇ, ಪಾಕಿಸ್ತಾನದ ರಾಷ್ಟ್ರೀಯ ಕ್ರೀಡೆಯೂ ಹೌದು.

ಲಂಡನ್ನಿನಲ್ಲಿ ನಡೆದ 1908ರ ಒಲಿಂಪಿಕ್ಸ್ ನ ಹಾಕಿ ಸ್ಪರ್ಧೆಯಲ್ಲಿ ಇಂಗ್ಲೆಂಡ್, ಐರ್ಲೆಂಡ್ ಮತ್ತು ಸ್ಕಾಟ್ಲೆಂಡ್ ಪ್ರತ್ಯೇಕವಾಗಿ ಸ್ಪರ್ಧಿಸಿದ್ದವು. 1921ರ ಸ್ಟಾಕ್ ಹೋಮ್ ಒಲಿಂಪಿಕ್ಸ್ ನಿಂದ ಹಾಕಿ ಕೈಬಿಡಲಾಯಿತು. 1920ರ ಆಂಟ್ ವರ್ಪ್ ಕೂಟಕ್ಕೆ ಮರಳಿತಾದರೂ, ಕ್ರೀಡೆಗೆ ಅಂತಾರಾಷ್ಟ್ರೀಯ ಒಕ್ಕೂಟ ಇಲ್ಲ ಎಂಬ ಕಾರಣ ನೀಡಿ 1924ರಲ್ಲಿ ಪ್ಯಾರಿಸ್ ಕೂಟದ ಸಂಘಟಕರು ಕೈಬಿಟ್ಟರು.

ಅಂತಾರಾಷ್ಟ್ರೀಯ ಹಾಕಿ ಒಕ್ಕೂಟದ ಸ್ಥಾಪನೆಗೆ ಇದು ಕಾರಣವಾಯಿತು. 1924ರಲ್ಲಿ ಪ್ಯಾರಿಸ್ ನಲ್ಲಿ ಫ್ರಾನ್ಸ್ ನ ಪಾಲ್ ಲ್ಯೂಟೆ ಎಂಬವರು ಎಫ್ಐಎಚ್ ಸ್ಥಾಪಿಸಿದರು. ಅವರೇ ಇದರ ಪ್ರಥಮ ಅಧ್ಯಕ್ಷರು. ಇದರ ಆರು ಸಂಸ್ಥಾಪಕ ಸದಸ್ಯ ರಾಷ್ಟ್ರಗಳೆಂದರೆ, ಆಸ್ಟ್ರಿಯಾ, ಬೆಲ್ಜಿಯಂ, ಚೆಕೊಸ್ಲಾವೇಕಿಯಾ, ಫ್ರಾನ್ಸ್, ಹಂಗೆರಿ, ಸ್ಪೇನ್ ಮತ್ತು ಸ್ವಿಟ್ಜರ್ಲೆಂಡ್.

ಮಹಿಳೆಯರ ಹಾಕಿಯ ಅಂತಾರಾಷ್ಟ್ರೀಯ ಒಕ್ಕೂಟ 1927ರಲ್ಲಿ ಸ್ಥಾಪನೆಯಾಯಿತು. 1982ರಲ್ಲಿ ಪುರುಷರು ಹಾಗೂ ಮಹಿಳೆಯರ ಒಕ್ಕೂಟಗಳು ವಿಲೀನಗೊಂಡು ಅಂತಾರಾಷ್ಟ್ರೀಯ ಹಾಕಿ ಒಕ್ಕೂಟ ಸಮಗ್ರ ರೂಪ ಪಡೆಯಿತು. ಭಾರತ 1928ರ ಆಮ್ ಸ್ಟರ್ಡಾಮ್ ಒಲಿಂಪಿಕ್ಸ್ ನಲ್ಲಿ ಎಫ್ಐಎಚ್ ಸದಸ್ಯತ್ವ ಪಡೆಯಿತು. ಭಾರತ ಒಕ್ಕೂಟದ ಮೊದಲ ಯುರೋಪೇತರ ಸದಸ್ಯ. 1964ರ ಹೊತ್ತಿಗೆ 50 ರಾಷ್ಟ್ರಗಳು ಸದಸ್ಯತ್ವ ಪಡೆದಿದ್ದವು. 1974ರಲ್ಲಿ ಸದಸ್ಯತ್ವ 71ಕ್ಕೆ ಏರಿತ್ತು. ಸದ್ಯ 5 ಖಂಡಗಳ 127 ರಾಷ್ಟ್ರಗಳು ಎಫ್ಐಎಚ್ ಸದಸ್ಯತ್ವ ಹೊಂದಿವೆ. ಇದರ ಕೇಂದ್ರ ಕಚೇರಿ ಲೌಸೇನ್ ನಲ್ಲಿದೆ.

**ಭಾರತದಲ್ಲಿ:**

ಹಾಕಿ ಬ್ರಿಟಿಷರ ಮೂಲಕ ಭಾರತವನ್ನು ಪ್ರವೇಶಿಸಿತು. 1985ರಲ್ಲಿ ಕೋಲ್ಕತ್ತದಲ್ಲಿ ಮೊದಲ ಕ್ಲಬ್ ಸ್ಥಾಪನೆಯಾಯಿತು. ಇದಾದ 10 ವರ್ಷಗಳಲ್ಲಿ ಬೇಯ್ಟನ್ ಕಪ್ ಮತ್ತು ಆಘಾ ಖಾನ್ ಟೂರ್ನಿಗಳು ಆರಂಭವಾದವು. 1928ರಲ್ಲಿ ಒಲಿಂಪಿಕ್ಸ್ ಪ್ರವೇಶಿಸಿದ ಭಾರತ ಮೊದಲ 5 ಪಂದ್ಯಗಳನ್ನು ಒಂದೂ ಗೋಲು ಬಿಟ್ಟುಕೊಡದೆ ಜಯಿಸಿತು. ನಂತರ 1932ರಿಂದ 1956ರವರೆಗೆ ಸತತ ಒಲಿಂಪಿಕ್ಸ್ ಗಳಲ್ಲಿ ಗೆದ್ದ ಭಾರತ 1964, 1980ರಲ್ಲೂ ಚಿನ್ನ ಗೆದ್ದಿದೆ.

**ಹಾಕಿ ಇಂಡಿಯಾ:**

ಭಾರತದಲ್ಲಿ ಹಾಕಿ ಆಡಳಿತದ ಉಸ್ತುವಾರಿ ಹೊತ್ತಿದ್ದ ಭಾರತೀಯ ಹಾಕಿ ಒಕ್ಕೂಟ (ಐಡಬ್ಲ್ಯುಎಚ್) ಭ್ರಷ್ಟಾಚಾರದ ಹಿನ್ನೆಲೆಯಲ್ಲಿ 2008ರಲ್ಲಿ ಬರ್ಖಾಸ್ತುಗೊಂಡ ಬಳಿಕ 2009ರಲ್ಲಿ ಪುರುಷರು ಹಾಗೂ ಮಹಿಳಾ ಹಾಕಿಯ ಏಕೀಕೃತ ಸಂಸ್ಥೆ ಹಾಕಿ ಇಂಡಿಯಾ ಸ್ಥಾಪನೆಯಾಗಿದೆ. ಇದರ ಚೊಚ್ಚಲ ಚುನಾವಣೆ 2010ರ ಫೆಬ್ರವರಿಯಲ್ಲಿ ನಡೆಯಲಿದೆ.

**ಹಾಕಿ ಸಂಸ್ಕೃತಿ:**

ಭಾರತದಲ್ಲಿ ಪಂಜಾಬ್ ಮತ್ತು ಕೊಡಗು ಹಾಕಿ ತೊಟ್ಟಿಲು ಎಂದೇ ಪರಿಗಣಿಸಲಾಗುತ್ತದೆ. ಈ ಭಾಗಗಳಿಂದ ಗರಿಷ್ಠ ಆಟಗಾರರು ರಾಷ್ಟ್ರ ಪ್ರತಿನಿಧಿಸಿದ್ದಾರೆ. ಕೊಡಗಿನಲ್ಲಿ ಮಕ್ಕಳು ಜನಿಸುವಾಗಲೇ ಕೈಯಲ್ಲಿ ಬಂದೂಕು ಮತ್ತು ಹಾಕಿ ಸ್ಟಿಕ್ ಹಿಡಿದಿರುತ್ತವೆ ಎಂಬ ಪ್ರತೀತಿ ಇದೆ.

ಕ್ರಿಕೆಟ್ ಗೆ ಡಾನ್ ಬ್ರಾಡ್ಮನ್ ಇರುವಂತೆ ಹಾಕಿಗೆ ಭಾರತದ ಧ್ಯಾನ್ ಚಂದ್. ಇವರು ಹಾಕಿ ವಿಶ್ವದ ಸರ್ವಶ್ರೇಷ್ಠ ಆಟಗಾರ. ಭಾರತ ಸರ್ಕಾರ ಧ್ಯಾನ್ ಚಂದ್ ಜನ್ಮದಿನವಾದ ಆಗಸ್ಟ್ 29ರಂದು ವಾರ್ಷಿಕ ಕ್ರೀಡಾ ಪ್ರಶಸ್ತಿಗಳನ್ನು ಪ್ರದಾನ ಮಾಡುತ್ತದೆ.

ಕರ್ನಾಟಕದಲ್ಲಿ ಕರ್ನಾಟಕ ಹಾಕಿ ಸಂಸ್ಥೆ ಕ್ರಿಯಾಶೀಲವಾಗಿದೆ. ವರ್ಷಂಪ್ರತಿ ವಿವಿಧ ವಯೋಮಾನದ, ಡಿವಿಜನ್ ಟೂರ್ನಿಗಳನ್ನು ಸಂಘಟಿಸುತ್ತದೆ. ಸದ್ಯ ಕರ್ನಾಟಕದ ಅರ್ಜುನ್ ಹಾಲಪ್ಪ, ವಿಎಸ್ ವಿನಯ, ರಘುನಾಥ್ ಮೊದಲಾದವರು ಭಾರತ ತಂಡದಲ್ಲಿದ್ದಾರೆ. ಕರ್ನಾಟಕದ ಅಂಪೈರ್ ರಘು ವಿಶ್ವ ಮಟ್ಟದಲ್ಲಿ ಹೆಸರು ಗಳಿಸಿದ್ದಾರೆ.

**ಪ್ರೀಮಿಯರ್ ಹಾಕಿ ಲೀಗ್:**

ಹಾಕಿಯ ವಾಣಿಜ್ಯೀಕರಣಕ್ಕೆ ಇದು ಭಾರತದ ಕೊಡುಗೆ. ಕ್ರಿಕೆಟ್ ನ ಇಂಡಿಯನ್ ಪ್ರೀಮಿಯರ್ ಲೀಗ್ ಪರಿಕಲ್ಪನೆಗೂ ಮುನ್ನವೇ ಇದು ಜಾರಿಗೆ ಬಂದಿತ್ತು. ಫ್ರಾಂಚೈಸಿ ತಂಡಗಳ ಪರಿಕಲ್ಪನೆ, ಟೈಮ್ ಔಟ್ ಇವೆಲ್ಲವೂ ಹಾಕಿ ಜನಪ್ರಿಯಗೊಳಿಸಲು ನೆರವಾದವು.

**ವಿವಿಧ ಟೂರ್ನಿಗಳು:**

ಒಲಿಂಪಿಕ್ಸ್ ಅಲ್ಲದೆ 4 ವರ್ಷಗಳಿಗೊಮ್ಮೆ ಹಾಕಿ ವಿಶ್ವಕಪ್ ನಡೆಯುತ್ತಿದೆ. ಭಾರತ 2010ರಲ್ಲಿ ಪ್ರಪ್ರಥಮ ಬಾರಿ ವಿಶ್ವಕಪ್ ಆತಿಥ್ಯ ವಹಿಸಲಿದೆ. ಇದಲ್ಲದೆ ಚಾಂಪಿಯನ್ಸ್ ಟ್ರೋಫಿ, ಚಾಂಪಿಯನ್ಸ್ ಚಾಲೆಂಜ್ ಪ್ರಮುಖ ಟೂರ್ನಿಗಳು. ಅಲ್ಲದೆ, ಏಷ್ಯಾಡ್, ಅಜ್ಲಾನ್ ಷಾ ಹಾಕಿಯಂಥ ವಿವಿಧ ಖಂಡಾಂತರ ಟೂರ್ನಿಗಳು ನಡೆಯುತ್ತವೆ. ಕಾಮನ್ವೆಲ್ತ್ ಕ್ರೀಡಾಕೂಟದಲ್ಲೂ ಹಾಕಿ ಭಾಗವಾಗಿದೆ. ದ್ವಿಪಕ್ಷೀಯ ಸರಣಿಗಳು ನಿರಂತರವಾಗಿ ನಡೆಯುತ್ತಿರುತ್ತವೆ.

**ಪ್ರಖ್ಯಾತ ಆಟಗಾರರು:**

ಭಾರತದಲ್ಲಿ ಹಾಕಿ ಜನಪ್ರಿಯಗೊಳ್ಳುವಲ್ಲಿ ಧ್ಯಾನ್ ಚಂದ್ ಕೊಡುಗೆ ದೊಡ್ಡದು. ಪರ್ಗತ್ ಸಿಂಗ್, ಧನರಾಜ್ ಪಿಳ್ಳೆ, ಸೋಮಯ್ಯ, ಎಂಪಿ ಗಣೇಶ್, ಆಶಿಶ್ ಬಲ್ಲಾಳ್ , ದಿಲೀಪ್ ಟರ್ಕಿ ಮೊದಲಾದ ಆಟಗಾರರು ಕ್ರೀಡೆಯಲ್ಲಿ ಮಹೋನ್ನತ ಸಾಧನೆ ಮಾಡಿದ್ದಾರೆ.

**ನಿಯಮಗಳು:**

ಪ್ರತೀ ತಂಡ 11 ಆಟಗಾರರನ್ನು ಆಡಿಸಬಹುದು. ಆಟದ ನಡುವೆ 5 ಬಾರಿ ಆಟಗಾರರನ್ನು ಬದಲಾಯಿಸಲು ಅವಕಾಶವಿರುತ್ತದೆ.

ತಂಡದಲ್ಲಿ ಓರ್ವ ಗೋಲ್ ಕೀಪರ್ ಕಡ್ಡಾಯ. ಉಳಿದ 10 ಆಟಗಾರರನ್ನು ಮುಖ್ಯವಾಗಿ ಮುನ್ಪಡೆ (ಎದುರಾಳಿಯ ಗೋಲು ಆವರಣದಲ್ಲಿ ಆಕ್ರಮಣ ಮಾಡುವವರು), ಮಿಡ್ ಫೀಲ್ಡರ್ಸ್ (ಅಂಕಣದ ಮಧ್ಯಭಾಗದಲ್ಲಿ ಆಟ ನಿಯಂತ್ರಿಸುವವರು) ಮತ್ತು ರಕ್ಷಣಾ ಆಟಗಾರರೆಂದು (ತಮ್ಮ ಗೋಲು ಆವರಣದಲ್ಲಿ ಕಾವಲು ಕಾಯುವವರು) ವಿಂಗಡಿಸಲಾಗುತ್ತದೆ.

ಆಟಗಾರರು ಚೆಂಡನ್ನು ಕಾಲು ಅಥವಾ ದೇಹದ ಯಾವುದೇ ಭಾಗದಿಂದ ತಡೆಯುಂತಿಲ್ಲ. ಗೋಲಿ ಮಾತ್ರ ಗೋಲು ಆವರಣದಲ್ಲಿ ಕೈ, ಕಾಲು, ದೇಹದಿಂದ ತಡೆಯಬಹುದು.

ಹಾಕಿಯಲ್ಲಿ ಗೋಲನ್ನು ಮುಕ್ತ ಗೋಲು, ಪೆನಾಲ್ಟಿ ಕಾರ್ನರ್ ಮತ್ತು ಪೆನಾಲ್ಟಿ ಸ್ಟ್ರೋಕ್ ರೂಪದಲ್ಲಿ ಮೂರು ಬಗೆಯಲ್ಲಿ ಗಳಿಸಬಹುದು. ಮುಕ್ತ ಗೋಲನ್ನು ಆಟಗಾರರು ಕೌಶಲ್ಯ ಪೂರ್ಣ ಆಟದಿಂದ ಗಳಿಸುತ್ತಾರೆ. ಆದರೆ, ಇದರಲ್ಲಿ ಆಟಗಾರ ಗೋಲನ್ನು ಎದುರಾಳಿ ಆವರಣದ ಗೋಲು ವರ್ತುಲದೊಳಗಿಂದ ಗಳಿಸಿರಬೇಕು. ಹೊರಭಾಗದಿಂದ ಹೊಡೆದ ಚೆಂಡು ಗೋಲು ಪೆಟ್ಟಿಗೆ ಪ್ರವೇಶಿಸಿದರೂ, ಗೋಲೆಂದು ಪರಿಗಣಿಸಲಾಗುವುದಿಲ್ಲ.

ಎದುರಾಳಿ ತಂಡಗಳು ಗೋಲು ಆವರಣದಲ್ಲಿ ತಪ್ಪು ಮಾಡಿದಾಗ, ನಿಯಮ ಉಲ್ಲಂಘಿಸಿದಾಗ ಪೆನಾಲ್ಟಿ ಕಾರ್ನರ್ ನೀಡಲಾಗುತ್ತದೆ. ರಕ್ಷಣಾ ಆಟಗಾರ ಚೆಂಡನ್ನು ತಡೆಯುವಾಗ ಒರಟಾಟ ಪ್ರದರ್ಶಿಸಿದರೂ, ಪೆನಾಲ್ಟಿ ಕಾರ್ನರ್ ನೀಡಲಾಗುತ್ತದೆ.

ಪೆನಾಲ್ಟಿ ಸ್ಟ್ರೋಕ್ ಗಳನ್ನು, ಆಟಗಾರ ಗೋಲು ಗಳಿಸದಂತೆ ತಡೆಯುವ ಯತ್ನದಲ್ಲಿ ರಕ್ಷಣಾ ಆಟಗಾರರು ನಿಯಮ ಉಲ್ಲಂಘಿಸಿದರೆ ಹಾಗೂ ಇನ್ನೂ ಹಲವು ಗಂಭೀರ ಪ್ರಮಾದಗಳಿಗೆ ನೀಡಲಾಗುತ್ತದೆ.

ಇದರಲ್ಲಿ ಓರ್ವ ನಿರ್ದಿಷ್ಟ ಆಟಗಾರ ಗೋಲು ಯತ್ನ ನಡೆಸುತ್ತಾನೆ. ಅದನ್ನು ಗೋಲಿ ಮಾತ್ರ ತಡೆಯಬೇಕು. ಗೋಲು ಪೆಟ್ಟಿಗೆಯ ಮುಂಭಾಗದಲ್ಲಿ 6.4ಮೀ. (7 ಗಜ) ಅಂತರದಿಂದ ಚೆಂಡು ಹೊಡೆಯಬೇಕು. ಉಳಿದೆಲ್ಲಾ ಆಟಗಾರರು ಸುಮಾರು 23ಮೀ. ದೂರದಲ್ಲಿರುತ್ತಾರೆ. ಪೆನಾಲ್ಟಿ ಸ್ಟ್ರೋಕ್ ಆಡುವ ಸಂದರ್ಭದಲ್ಲಿ ಪಂದ್ಯ ಗಡಿಯಾರ ಸ್ಥಗಿತಗೊಳಿಸಲಾಗಿರುತ್ತದೆ.

# ಪೋಲೋ

ಕುದುರೆಯ ಮೇಲೆ ಸವಾರಿ ಮಾಡುತ್ತ ಕೈಯಲ್ಲಿರುವ ದಾಂಡಿನಿಂದ ಎದುರು ತಂಡದ ಗೋಲಿನಲ್ಲಿ ಚೆಂಡನ್ನು ನುಗಿಸುವ ಆಟ (ಪೋಲೋ). ಇದಕ್ಕೆ ಕುದುರೆಯ ಮೇಲೆ ಸವಾರಿಮಾಡುತ್ತ ಆಡುವ ಹಾಕಿ ಎಂದು ಹೇಳುತ್ತಾರೆ. ಪೋಲೋ ಪೂರ್ವದೇಶಗಳಲ್ಲಿ ಮೊದಲು ಬಳಕೆಗೆ ಬಂತು. ಈಗ ಪೋಲೋ ಹೆಚ್ಚಾಗಿ ಬಳಕೆಯಲ್ಲಿರುವ ರಾಷ್ಟ್ರಗಳೆಂದರೆ ಇಂಗ್ಲೆಂಡ್, ಅಮೆರಿಕ, ಆಸ್ಟ್ರೇಲಿಯ, ಭಾರತ, ಪಾಕಿಸ್ತಾನ, ನ್ಯೂಜಿಲೆಂಡ್, ದಕ್ಷಿಣ ಅಮೆರಿಕೆಯ ಅರ್ಜಂಟೀನದಲ್ಲಿದು ಜನಪ್ರಿಯ ಆಟ. ಟಿಬೆಟನ್ ಭಾಷೆಯಲ್ಲಿ ಪುಲು ಎಂದರೆ ಚೆಂಡು. ಪುಲು ಪದದಿಂದ ಪೋಲೋ ಬಂತು. ಪೋಲೋ ಬೆಳೆದುಬಂದ ಬಗೆ ತುಂಬ ಕುತೂಹಲಕಾರಿಯಾಗಿದೆ. ಟಿಬೆಟ್ಟಿನಲ್ಲಿ ನೂರಾರು ವರ್ಷಗಳ ವರೆಗೆ ಪೋಲೋ ಜನಪ್ರಿಯ ಆಟವಾಗಿತ್ತು. ಆದರೆ ಒಂದು ಪ್ರಾಚೀನ ದಾಖಲೆಯಂತೆ ಪ್ರಥಮವಾಗಿ ಪೋಲೋವನ್ನು ಇರಾನಿನಲ್ಲಿ ಆಡಲಾಯಿತೆಂದು ತಿಳಿದುಬಂದಿದೆ. ೧೬೧೩ರಲ್ಲಿ ಪ್ರಕಟವಾದ ಇರಾನ್ ಪ್ರವಾಸ ಗ್ರಂಥದಲ್ಲಿ ಆಮತೋನಿ ಶೆರ್ಲಿ ಇರಾನಿನ ಪೋಲೋ ಆಟವನ್ನು ಕುರಿತು ಬರೆದಿದ್ದಾನೆ. ಪಾರಸಿ ಕವಿ ಫಿರ್ದೂಸಿಯ ಶಹನಾಮ ಗ್ರಂಥದಲ್ಲಿಯೂ ಪೋಲೋ ಆಟದ ಉಲ್ಲೇಖವಿದೆ. ಪರ್ಷಿಯದಿಂದ ಈಜಿಪ್ಟ್, ಅನಂತರ ಚೀನ, ಜಪಾನ್, ಟಿಬೆಟ್ ಹಾಗೂ ಭಾರತಗಳಿಗೆ ಪೋಲೋ ತಲುಪಿತು. ಇರಾನಿನಲ್ಲಿ ಸುಮಾರು ೧೨ನೆಯ ಶತಮಾನದ ಆಟದ ಮೈದಾನವಿದೆ. ಇಲ್ಲಿ ಕಲ್ಲಿನ ಗೋಲುಕಂಬಗಳಿವೆ. ಹಿಂದೆ ಇಲ್ಲಿ ಪಾರಸೀಗಳು ಪೋಲೋ ಆಡುತ್ತಿದ್ದರು.

ಭಾರತದಲ್ಲಿ ಮೊಗಲರಸರ ಕಾಲದಲ್ಲಿ ೧೬ನೆಯ ಶತಮಾನದ ಪ್ರಾರಂಭದಲ್ಲಿ ಹಾಗೂ೧೮ನೆಯ ಶತಮಾನದ ಮಧ್ಯದಲ್ಲಿ ಪೋಲೋ ಪ್ರಸಿದ್ಧಿ ಪಡೆದಿತ್ತು. ಮೊಗಲರಸರಿಗೆ ಪೋಲೋ ಮೆಚ್ಚಿನ ಆಟವಾಗಿತ್ತು. ಜಾಗನ್ ಎಂಬ ಅವರ ಆಟ ಇಂದಿನ ಪೋಲೋವನ್ನು ಬಹಳ ಹೋಲುತ್ತಿತ್ತು. ಮೊಗಲರಸರಲ್ಲಿಯೇ ಜನಪ್ರಿಯನಾದ ಅರಸ ಅಕ್ಬರನಿಗೆ ಜಾಗನ್ ಎಂದರೆ ಮೆಚ್ಚಿನ ಆಟ. ಅದರಲ್ಲವನು ನಿಷ್ಣಾತ. ಆತನೇ ಆಟದ ಹೊಸನಿಯಮಗಳನ್ನು ರಚಿಸಿದನೆಂದು ತಿಳಿದುಬರುತ್ತದೆ. ಮೊಗಲರ ಅವನತಿಯ ಅನಂತರ ಭಾರತದಲ್ಲಿ ಸುಮಾರು ೧೦೦ ವರ್ಷಗಳ ವರೆಗೆ ಪೋಲೊ ಕಣ್ಮರೆಯಾಗಿತ್ತು. ಆದರೆ ಆಗ್ನೇಯ ಮತ್ತು ವಾಯುವ್ಯ ಸರಹದ್ದು ಪ್ರದೇಶಗಳಲ್ಲಿನ ಕೆಲವು ಜಮೀನುದಾರರು ತಮ್ಮದೇ ಆದ ಒಂದು ಬಗೆಯ ಪೋಲೋ ಆಟವನ್ನು ಆಡುತ್ತಿದ್ದರು. ಇಂಥ ಆಟವನ್ನು ಒಮ್ಮೆ ಅಸ್ಸಾಂ ರಾಜ್ಯದಲ್ಲಿನ ಚಹತೋಟದ ಆಂಗ್ಲ ಮಾಲಿಕರು ಕಂಡರು. ಆಟ ಅವರಿಗೆ ಮೆಚ್ಚಿಗೆಯಾಯಿತು. ಅವರೂ ಆಡಲು ಪ್ರಾರಂಭಿಸಿದರು. ೧೮೫೯ರಲ್ಲಿ ಅಸ್ಸಾಮಿನಲ್ಲಿ ಪೋಲೋ ಕ್ಲಬ್ ಸ್ಥಾಪನೆಯಾಯಿತು. ಆಟದ ಕೆಲವು ನಿಯಮಗಳು ಜಾರಿಗೆ ಬಂದುವು. ಕಲ್ಕತ್ತದಲ್ಲಿ (೧೮೬೦) ಪೋಲೋ ಕ್ಲಬ್ ಪ್ರಾರಂಭವಾಯಿತು. ಭಾರತದಲ್ಲಿನ ಆಂಗ್ಲರನ್ನನುಸರಿಸಿ ಇಂಗ್ಲೆಂಡಿನ ಆಂಗ್ಲರೂ ಪೋಲೋ ಆಟದಲ್ಲಿ ಆಸಕ್ತಿ ತೋರಿದರು. ಕಳೆದ ಶತಮಾನದ ಅಂತ್ಯದ ವೇಳೆಗೆ ಇನ್ನಾವ ದೇಶದಲ್ಲೂ ಬಳಕೆಯಲ್ಲಿರದಷ್ಟು ಪೋಲೋ ಭಾರತದಲ್ಲಿ ವ್ಯಾಪಕವಾಗಿತ್ತು. ೧೮೯೨ರಲ್ಲಿ ಇಂಡಿಯನ್ ಪೋಲೋ ಸಂಘದ ಸ್ಥಾಪನೆಯಾಯಿತು. ಜೋಧಪುರ ಬಿಕಾನೇರ್, ಪಾಟಿಯಾಲ ಮತ್ತು ಹೈದರಾಬಾದುಗಳಲ್ಲಿ ಹಲವಾರು ಜನರು ಪೋಲೋ ಆಡಲು ಪ್ರಾರಂಭಿಸಿದರು. ೧೯೩೦ರಿಂದ ೧೯೩೮ರ ವರೆಗೆ ಅಖಿಲಭಾರತ ಚಾಂಪಿಯನ್ ಷಿಪ್ ಗಳನ್ನು ಜಯಪುರದ ಪೋಲೋ ತಂಡ ಗೆದ್ದಿ ತಲ್ಲದೆ ೧೯೩೩ರಲ್ಲಿ ಇಂಗ್ಲೆಂಡಿನಲ್ಲಿ ನಡೆದ ಎಲ್ಲ ಸ್ಪರ್ಧಗಳಲ್ಲೂ ಜಯ ಪಡೆಯಿತು. ಇಂಗ್ಲೆಂಡಿನಲ್ಲಿ ೧೮೭೧ರಲ್ಲಿ ನಡೆದ ಪೋಲೋ ಸ್ಪರ್ಧೆಯ ತಂಡದಲ್ಲಿ ಎಂಟು ಆಟಗಾರರಿದ್ದರು. ೧೮೭೩ರಲ್ಲಿ ಆಟಗಾರರ ಸಂಖ್ಯೆಯನ್ನು ಐದಕ್ಕೆ ಇಳಿಸಲಾಯಿತು. ೧೮೮೨ರಲ್ಲಿ ಆ ಸಂಖ್ಯೆ ನಾಲ್ಕಕ್ಕೆ ಇಳಿಯಿತು.

ಅಮೆರಿಕದಲ್ಲಿ ೧೮೩೩ರಲ್ಲಿ ಪ್ರಥಮವಾಗಿ ಪೋಲೋ ಆಡಲಾಯಿತು.

ಪೋಲೋ ಆಟ ಹಾಕಿ, ಕಾಲ್ಚೆಂಡುಗಳಂತೆ ಎರಡು ತಂಡಗಳಲ್ಲಿ ನಡೆಯುತ್ತದೆ. ಪ್ರತಿಯೊಂದು ತಂಡದಲ್ಲಿ ನಾಲ್ಕು ಆಟಗಾರರಿರುತ್ತಾರೆ. ಆಟದ ಮೈದಾನ ೩೦೦ ಗಜ ಉದ್ದ ಮತ್ತು ೨೦೦ ಗಜ ಅಗಲವಿರುತ್ತದೆ. ಮರದ ಹಲಗೆ ಹಾಸಿದ ಮೈದಾನವಾದರೆ ಅಗಲ ೧೬೦ ಗಜ ಇರುತ್ತದೆ. ಆಟದ ದಾಂಡಿನ ಉದ್ದ ೪೮ರಿಂದ ೫೪ ಅಂಗುಲ. ಇದಕ್ಕೆ ಬಡಿಗೆಯನ್ನು ಹೋಲುವ ಅಡ್ಡ ಶಿರೋಭಾಗವಿರುತ್ತದೆ. ಈ ಭಾಗದಿಂದ

ಚೆಂಡನ್ನು ಹೊಡೆಯುತ್ತಾರೆ. ದಾಂಡಿನ ಭಾರ ಸುಮಾರು ಒಂದು ಪೌಂಡು ಇರುತ್ತದೆ. ಚೆಂಡನ್ನು ವಿಲೋ ಮರದ ಬೇರಿನಿಂದಾಗಲಿ ದಿಂಡಿನಿಂದಾಗಲಿ ಮಾಡುತ್ತಾರೆ. ಇದರ ವ್ಯಾಸ ೩ ೧/೨ ಅಂಗುಲ. ಭಾರ ೪೩/೪ದಿಂದ ೪೩/೪ ಔನ್ಸುಗಳು, ಎರಡು ಕಡೆಯ ಗೋಲುಗಳ ನಡುವಿನ ಪರಮಾವಧಿ ದೂರ ೨೭೦ ೨೪ ಅಡಿ ಅಂತರವಿರುತ್ತದೆ. ಗೋಲುಕಂಬದ ಎತ್ತರ ೧೦ ಅಡಿ. ಪೋಲೋ ಆಟಕ್ಕೆ ನಿಶ್ಚಿತವಾದ ಅವಧಿ ಒಂದು ಗಂಟೆ. ಎಂಡು ಸುತ್ತುಗಳಲ್ಲಿ ಆಡುತ್ತಾರೆ. ಒಂದು ಸುತ್ತಿನ ಅವಧಿ ೭೧/೨ ಮಿನಿಟುಗಳು. ಪ್ರತಿಯೊಂದು ಸುತ್ತಿನ ಮಧ್ಯೆ ೩ ಮಿನಿಟುಗಳ ವಿರಾಮ. ನಾಲ್ಕು ಸುತ್ತುಗಳು ಮುಗಿದ ಅನಂತರ ೫ ಮಿನಿಟುಗಳ ವಿಶ್ರಾಂತಿ, ಈ ಸುತ್ತುಗಳಿಗೆ ಚಕ್ಕರ್ ಎನ್ನುತ್ತಾರೆ. ಚಕ್ಕರ್ ಭಾರತೀಯ ಪದ. ಇದು ಅಂತರರಾಷ್ಟ್ರೀಯ ಆಟಗಳಲ್ಲೂ ಬಳಕೆಯಲ್ಲಿದೆ. ಪೋಲೋ ಅತಿ ವೇಗವಾಗಿ ಸಾಗುವ ಆಟ. ಇದರಲ್ಲಿ ಕುದುರೆಸವಾರಿ ಮಾಡುವ ಇಬ್ಬರು ಅಂಪೈರುಗಳು ಆಟದ ಮೈದಾನದ ಒಂದೊಂದು ಬದಿಯಲ್ಲಿ ಇರುತ್ತಾರೆ. ಆಟಗಾರರು ನಿಯಮಗಳನ್ನು ಮೀರಿದಾಗ ಅಂಪೈರುಗಳು ವಿಚಾರ ವಿನಿಮಯ ಮಾಡಿ ತಮ್ಮ ನಿರ್ಧಾರವನ್ನು ಪ್ರಕಟಿಸುತ್ತಾರೆ. ಅಂಪೈರುಗಳಲ್ಲಿ ಒಮ್ಮತವಾಗದಿದ್ದರೆ ರೆಫರಿ ಅಂತಿಮ ನಿರ್ಧಾರ ನೀಡುತ್ತಾನೆ. ರೆಫರಿ ಮೈದಾನದ ಪಾರ್ಶ್ವದ ಎಲ್ಲೆಯಲ್ಲಿದ್ದು ಆಟವನ್ನು ವೀಕ್ಷಿಸುತ್ತಾನೆ. ಪೋಲೋ ಆಟದಲ್ಲಿ ಆಟಗಾರರಿಗೆ ಮತ್ತು ಕುದುರೆಗಳಿಗೆ ಅಪಾಯವಾದಿರಲೆಂದು ಹಲವಾರು ಸಂರಕ್ಷಣಾ ನಿಯಮಗಳನ್ನು ರೂಪಿಸಲಾಗಿದೆ. ಪ್ರತಿ ತಂಡದಲ್ಲಿ ನಾಲ್ಕು ಆಟಗಾರರಿರುತ್ತಾರಷ್ಟೆ. ಅವರಿಗೆಲ್ಲ ೧, ೨, ೩, ೪ ಹೀಗೆ ಸಂಖ್ಯೆಗಳನ್ನು ಕೊಟ್ಟಿರುತ್ತಾರೆ. ಇದು ಆಟದ ಮೈದಾನದಲ್ಲಿ ಮಾಡುವಲ್ಲಿ ಮೊದಲನೆಯ ಆಟಗಾರನ ಪಾತ್ರ ಪ್ರಮುಖವಾದುದು. ಎರಡನೆಯ ಆಟಗಾರನು ಇತರ ಆಟಗಾರರಿಗಿಂತ ಹೆಚ್ಚು ಆಕ್ರಮಣ ಮಾಡುವುದರಿಂದ ಇವನದು ಕಷ್ಟದ ಸವಾರಿ ಎಂದು ಹೇಳಬಹುದು. ಮೂರನೆಯ ಆಟಗಾರ ಆಕ್ರಮಣ ಮಾಡುವನಲ್ಲದೇ ಎದುರಾಳಿ ತಂಡದವರು ಗೋಲ್ ಹೊಡೆಯದಂತೆ ನೋಡಿಕೊಳ್ಳಬೇಕಾಗುತ್ತದೆ. ನಾಲ್ಕನೆಯ ಆಟಗಾರನ ಪ್ರಮುಖ ಕಾರ್ಯವೆಂದರೆ ರಕ್ಷಣೆ. ಇವನು ಆಕ್ರಮಣಕ್ಕೆ ಹೋಗದೇ ಎದುರು ತಂಡದ ಆಟಗಾರರು ಗೋಲ್ ಹೊಡೆಯಬೇಕಾಗುತ್ತದೆ. ಚೆಂಡನ್ನು ನೇರವಾಗಿ ಹಿಂದಕ್ಕೆ ಅಥವಾ ಮುಂದಕ್ಕೆ ಹೊಡೆಯಬಹುದು. ಆಗ ಚೆಂಡಿಗೆ ಸಮನಾಂತರವಾಗಿ ಚೆಂಡು ತನ್ನ ಬಲ ಬದಿಗೆ ಬರುವಂತೆ ಆಟಗಾರ ಸರಿಯುತ್ತಾನೆ. ಒಂದು ಸುತ್ತಿನಲ್ಲಿ ಅಂದರೆ ೭೧/೨ ಮಿನಿಟುಗಳಲ್ಲಿ ಆಟಗಾರ ಅನೇಕ ಸಲ ಓಡಬೇಕಾಗುತ್ತದೆ. ತಿರುಗಬೇಕಾಗುತ್ತದೆ. ಆಗ ಕುದುರೆಗೆ ದಣಿವಾಗುವುದು ಸಹಜ, ಪ್ರತಿ ಸುತ್ತಿನ ಅನಂತರ ಕುದುರೆಯನ್ನು ಬದಲಾಯಿಸಲು ಅನುಕೂಲವಿದೆ. ಹೆಚ್ಚು ಗೋಲುಗಳನ್ನು ಪಡೆದ ತಂಡ ಆಟದಲ್ಲಿ ಗೆಲ್ಲುತ್ತದೆ. ಹ್ಯಾಂಡಿಕ್ಯಾಪ್ ಪೋಲೋದ ವೈಶಿಷ್ಟ್ಯ ಹೀಗಿದೆ: ಒಬ್ಬ ಆಟಗಾರ ತನ್ನ ತಂಡದ ಪರವಾಗಿ ಎಷ್ಟು ಗೋಲುಗಳನ್ನು ಪಡೆಯುತ್ತಾನೆ ಎಂಬ ಎಣಿಕೆಯ ಮೇಲೆ ಅವನಿಗೆ ಹ್ಯಾಂಡಿಕ್ಯಾಪ್ ಸಂಖ್ಯೆಯನ್ನು ಅನ್ವಯಿಸಲಾಗುತ್ತದೆ. ೯ ಹ್ಯಾಂಡಿಕ್ಯಾಪ್ ಆಟಗಾರನೆಂದರೆ ೯ ಗೋಲುಗಳನ್ನು ಗಳಿಸಿದವ ಎಂದರ್ಥ. ಆಟದ ಪ್ರಾರಂಭದಲ್ಲಿ ಮತ್ತು ಪ್ರತಿಯೊಂದು ಗೋಲಾದ ಅನಂತರ ಚೆಂಡನ್ನು ಮೈದಾನದ ಮಧ್ಯಕ್ಕೆ ಎಸೆದು ಆಟ ಪ್ರಾರಂಭಿಸುವವರು ಅಂಪೈರುಗಳು. ಆಗ ಎರಡೂ ಪಂಗಡದ ಆಟಗಾರರು ಅಂಪೈರಿನ ಎರಡು ಪಾರ್ಶ್ವಗಳಲ್ಲಿ ಸಾಲಾಗಿ ನಿಂತಿರುತ್ತಾರೆ. ಪ್ರತಿಗೋಲಿಗೂ ಪಂಗಡಗಳು ಬದಿ ಬದಲಾಯಿಸಿಕೊಳ್ಳುತ್ತಾರೆ. ಪೋಲೋದಲ್ಲಿ ಆಟಗಾರ ಪರಿಣತನಾಗಿರುವಂತೆ ಕುದುರೆ ಸಹ ಉತ್ತಮವಾಗಿರಬೇಕು, ಚುರುಕಿನದಾಗಿರಬೇಕು. ಆಟಗಾರನಿಗೂ ಕುದುರೆಗೂ ಹಲವಾರು ವರ್ಷಗಳ ತರಬೇತಿ ಅವಶ್ಯ. ಯೋಗ ತರಬೇತಿ ಪಡೆದ ಕುದುರೆ, ಸವಾರನ ಅಪೇಕ್ಷೆಯಂತೆ ಚೆಂಡಿನ ಓಟ ತಿಳಿದು ಓಡಬಲ್ಲುದು. ಆಟಗಾರ ಉತ್ತಮ ದೇಹದಾರ್ಢ್ಯ ಹೊಂದಿರಬೇಕಲ್ಲದೆ ತುಂಬ ಚುರುಕಿನವನಾಗಿರಬೇಕು. ಚೆಂಡು ಎತ್ತಸಾಗುತ್ತಿದೆ ಎಂಬುದನ್ನು ಆತ ಯಾವಾಗಲೂ ನೋಡುತ್ತಿರಬೇಕಾಗುವುದರಿಂದ ಆಟಗಾರನ ದೃಷ್ಟಿ ತೀಕ್ಷ್ಣವಾಗಿರಬೇಕು. ಪೋಲೋ ಶ್ರೀಮಂತರ ಆಟವೆಂದು ಹೇಳಲಾಗುತ್ತಿದೆ. ಪೋಲೋ ತುಂಬ ವೆಚ್ಚದಾಯಕವಾಗಿರುವುದೇ ಇದಕ್ಕೆ ಕಾರಣ. ಉತ್ತಮ ತಳಿಯ ಕುದುರೆಗೆ, ಅದರ ತರಬೇತಿಗೆ, ಅದಕ್ಕೆ ನೀಡಬೇಕಾದ ಪೌಷ್ಟಿಕ ಆಹಾರಕ್ಕೆ, ಕುದುರೆಯನ್ನು ಒಂದು ಸ್ಥಳದಿಂದ ಇನ್ನೊಂದೆಡೆಗೆ ಸಾಗಿಸುವುದಕ್ಕೆ ತುಂಬ ಹಣ ಖರ್ಚುಮಾಡಬೇಕಾಗುತ್ತದೆ. ಇಪ್ಪತ್ತನೆಯ ಶತಮಾನದ ಮಧ್ಯದಲ್ಲಿ ಅರ್ಜಂಟೀನ ಮತ್ತು ಅಮೆರಿಕ ಪ್ರಪಂಚದ ಇತರ ರಾಷ್ಟ್ರಗಳನ್ನೆಲ್ಲ ಪೋಲೋದಲ್ಲಿ ಹಿಂದೆಹಾಕಿದ್ದುವು. ಕಳೆದ ಶತಮಾನದ ಅಂತ್ಯದವರೆಗೆ ಪೋಲೋ ಭಾರತದಲ್ಲಿ ವ್ಯಾಪಕವಾಗಿತ್ತು. ೧೯೩೬ರಲ್ಲಿ ಬರ್ಲಿನ್, ಒಲಂಪಿಕ್ ಕ್ರೀಡೆಗಳಲ್ಲಿ ಪೋಲೋ ಸೇರಿತ್ತು. ಈಗ ಅಂತರರಾಷ್ಟ್ರೀಯ ಪೋಲೋ ಕ್ರೀಡೆಗಳು ನಡೆಯುತ್ತಿವೆ. ಕರ್ನಲ್ ಪ್ರೇಮಸಿಂಗ್, ಜಯಪುರದ ಮಹಾರಾಜ, ಅಮೆರಿಕದ ಸೆಸಿಲ್ ಸ್ಮಿತ್ ಇವರೆಲ್ಲ ಶ್ರೇಷ್ಠ ಪೋಲೋ ಆಟಗಾರರು.

ಪೋಲೋ ಆಟಗಳಲ್ಲಿ ಕುದುರೆಯಂತೆ ಸೈಕಲ್ ಬಳಸುವುದೂ ಇದೆ. ನೀರಿನಲ್ಲಾಡುವ ಪೋಲೋಗಳೂ ಉಂಟು.

## ಟೆನಿಸ್

ಟೆನಿಸ್ ಇಬ್ಬರು ಆಟಗಾರರು (ಸಿಂಗಲ್ಸ್) ಅಥವಾ ತಲಾ ಇಬ್ಬರು ಆಟಗಾರರ ಎರಡು ತಂಡಗಳು (ಡಬಲ್ಸ್) ಆಡುವ ಕ್ರೀಡೆ. ಆಟಗಾರರು ತಂತಿಗಳಿಂದ ಕಟ್ಟಲಾಗಿರುವ ರಾಕೆಟ್ ನಿಂದ ಒಳಗೆ ಟೊಳ್ಳಿರುವ ರಬ್ಬರ್ ಚೆಂಡನ್ನು ಹೊಡೆಯುತ್ತಾರೆ. ಇಬ್ಬರು ಆಟಗಾರರ ನಡುವೆ ಅಂಕಣವನ್ನು ಬಲೆಯಿಂದ ಪ್ರತ್ಯೇಕಿಸಲಾಗಿರುತ್ತದೆ. ಆಧುನಿಕ ಯುಗದ ಟೆನಿಸ್ ಲಾನ್ ಟೆನಿಸ್ ರೂಪದಲ್ಲಿ ಯುನೈಟೆಡ್ ಕಿಂಗ್ ಡಮ್ ನಲ್ಲಿ 19ನೇ ಶತಮಾನದ ಕೊನೆಯ ಭಾಗದಲ್ಲಿ ಜನಪ್ರಿಯವಾಯಿತು. ಇದು ಇಂಗ್ಲಿಷ್ ಮಾತನಾಡುವ ಜನರಿಂದ ಜಗತ್ತಿನೆಲ್ಲೆಡೆ ಹರಡಿತು. ಇದೊಂದು ಒಲಿಂಪಿಕ್ಸ್ ಕ್ರೀಡೆಯಾಗಿದ್ದು ಸಮಾಜದ ಎಲ್ಲಾ ವರ್ಗ, ವಯೋಮಾನದವರು ಆಡುತ್ತಾರೆ. 1890ರಿಂದೀಚೆಗೆ ಟೆನಿಸ್ ನ ನಿಯಮದಲ್ಲಿ ಬದಲಾವಣೆಯಾಗಿದ್ದು ಬಹಳ ವಿರಳ. ಎರಡು ಅಪವಾದಗಳೆಂದರೆ, 1908ರಿಂದ 1960ರವರೆಗೆ ಆಟಗಾರ ಸರ್ವ್ ಮಾಡುವಾಗ ಒಂದು ಕಾಲು ನೆಲದಲ್ಲೇ ಇರಬೇಕು ಎಂಬ ನಿಯಮ ರೂಪಿಸಲಾಗಿತ್ತು. 1970ರ ದಶಕದಲ್ಲಿ ಟೈಬ್ರೇಕರ್ ನಿಯಮ ಅಳವಡಿಸಲಾಯಿತು. ಇತ್ತೀಚೆಗೆ ವೃತ್ತಿಪರ ಟೆನಿಸ್ ನಲ್ಲಿ ಲೈನ್ ತೀರ್ಪುಗಳ ವಿರುದ್ಧ ಹಾಕ್-ಐ ತಂತ್ರಜ್ಞಾನದ ಬಳಕೆ ನಿಯಮ ಅಳವಡಿಸಿಕೊಳ್ಳಲಾಗಿದೆ.

ಟೆನಿಸ್ ಪ್ರೇಕ್ಷಕ ಕ್ರೀಡೆಯಾಗಿ ಭಾರೀ ಜನಪ್ರಿಯವಾಗಿದೆ. ಪ್ರತೀ ವರ್ಷ ನಾಲ್ಕು ಗ್ರಾಂಡ್ ಸ್ಲಾಂ ಟೂರ್ನಿಗಳು (ಮೇಜರ್ ಗಳೆಂದೂ ಕರೆಯುತ್ತಾರೆ) ಟೆನಿಸ್ ವೇಳಾಪಟ್ಟಿಯ ಭಾಗವಾಗಿರುತ್ತದೆ. ಅವುಗಳು ಆಸ್ಟ್ರೇಲಿಯನ್ ಓಪನ್, ಫ್ರೆಂಚ್ ಓಪನ್, ವಿಂಬಲ್ಡನ್ ಮತ್ತು ಯುಎಸ್ ಓಪನ್ .

ಲಂಡನ್ ನಲ್ಲಿ ಮೊದಲ ವಿಂಬಲ್ಡನ್ ಚಾಂಪಿಯನ್ ಷಿಪ್ 1877ರಲ್ಲಿ ಆರಂಭವಾಯಿತು. ಈಗ ಯುಎಸ್ ಓಪನ್ ಎಂದು ಕರೆಯಲಾಗುವ ಯುಎಸ್ ರಾಷ್ಟ್ರೀಯ ಪುರುಷರ ಸಿಂಗಲ್ಸ್ ಚಾಂಪಿಯನ್ ಷಿಪ್ 1881ರಲ್ಲಿ ಪ್ರಾರಂಭವಾಯಿತು. ಅದೇ ರೀತಿ ಮೊದಲ ಫ್ರೆಂಚ್ ಓಪನ್ ನಡೆದಿದ್ದು 1891ರಲ್ಲಿ. ಆಸ್ಟ್ರೇಲಿಯನ್ ಓಪನ್ 1905ರಲ್ಲಿ ಮೊದಲು ನಡೆಯಿತು.

ಸದ್ಯ ಅಂತಾರಾಷ್ಟ್ರೀ ಟೆನಿಸ್ ಸಂಸ್ಥೆ (ಐಟಿಎಫ್) ಎಂದು ಕರೆಯಲಾಗುವ ಅಂತಾರಾಷ್ಟ್ರೀಯ ಲಾನ್ ಟೆನಿಸ್ ಒಕ್ಕೂಟದ ನಿಯಮಾವಳಿಗಳನ್ನು 1924ರಲ್ಲಿ ರೂಪಿಸಲಾಯಿತು. ಆದರೆ, ಅದೇ ವರ್ಷ ಒಲಿಂಪಿಕ್ಸ್ ನಿಂದ ಟೆನಿಸ್ ಕೈಬಿಡಲಾಯಿತು. ಇದಾದ 60 ವರ್ಷಗಳ ಬಳಿಕ 21 ವಯೋಮಿತಿಯ ಪ್ರದರ್ಶನ ಕ್ರೀಡೆಯಾಗಿ ಟೆನಿಸ್ ಒಲಿಂಪಿಕ್ಸ್ ಗೆ ಮರಳಿತು. 1988ರ ಸಿಯೋಲ್ ಒಲಿಂಪಿಕ್ಸ್ ನಿಂದ ಟೆನಿಸ್ ಪೂರ್ಣ ಪ್ರಮಾಣದಲ್ಲಿ ಪದಕ ಕ್ರೀಡೆಯೆನಿಸಿತು.

ಪುರುಷರ ರಾಷ್ಟ್ರೀಯ ತಂಡಗಳ ಡೇವಿಸ್ ಕಪ್ ಮೊದಲು ನಡೆದಿದ್ದು 1900ರಲ್ಲಿ. ಇದಕ್ಕೆ ತತ್ಸಮಾನವಾದ ಮಹಿಳೆಯರ ಟೂರ್ನಿ ಫೆಡ್ ಕಪ್ (ಫೆಡರೇಷನ್ ಕಪ್) ಐಟಿಎಫ್ ನ 50ನೇ ವರ್ಷಾಚರಣೆ ಸಂದರ್ಭದಲ್ಲಿ 1963ರಲ್ಲಿ ಆರಂಭಿಸಲಾಯಿತು.

1926ರಲ್ಲಿ ಸಿಸಿ ಪೈಲ್ ಎನ್ನುವವರು ಕೆಲವು ಅಮೆರಿಕ ಹಾಗೂ ಫ್ರೆಂಚ್ ಟೆನಿಸ್ ಆಟಗಾರರ ನೆರವಿನಿಂದ ಪ್ರಪ್ರಥಮ ವೃತ್ತಿಪರ ಟೂರ್ ಪ್ರಾರಂಭಿಸಿದರು. ಇದರಲ್ಲಿ ಭಾಗವಹಿಸಿದ ಖ್ಯಾತನಾಮರೆಂದರೆ ಅಮೆರಿಕದ ವಿನ್ನಿ ರಿಚರ್ಡ್ಸ್ ಮತ್ತು ಫ್ರೆಂಚ್ ಮಹಿಳೆ ಸುಝಾನ್ ಲೆಂಗ್ಲೇನ್. ಆಟಗಾರರು ವೃತ್ತಿಪರರಾದ ಮೇಲೆ ಅವರು ಗ್ರಾಂಡ್ ಸ್ಲಾಂ (ಅಮೆಚೂರ್) ಟೂರ್ನಿಗಳಲ್ಲಿ ಆಡುವಂತಿರಲಿಲ್ಲ.

1968ರಲ್ಲಿ ವಾಣಿಜ್ಯ ಒತ್ತಡಗಳು ಹಾಗೂ ಕೆಲವು ಅಮೆಚೂರ್ ಆಟಗಾರರು ಗುಪ್ತವಾಗಿ ಹಣ ಪಡೆದು ಆಡುತ್ತಾರೆ ಎಂಬ ವದಂತಿಗಳು ಹರಡಿದ ಬಳಿಕ ಮುಕ್ತ ಟೆನಿಸ್ ಯುಗ ಆರಂಭವಾಯಿತು. ಅದರಿಂದಾಗಿ ಎಲ್ಲಾ ಆಟಗಾರರು ಎಲ್ಲಾ ಟೂರ್ನಿಗಳಲ್ಲಿ ಭಾಗವಹಿಸುವುದು ಸಾಧ್ಯವಾಯಿತು. ಇದಾದ ಬಳಿಕ ಅಂತಾರಾಷ್ಟ್ರೀಯ ವೃತ್ತಿಪರ ಟೆನಿಸ್ ಸರ್ಕ್ಯೂಟ್ ಸ್ಥಾಪನೆಯಾಯಿತು. ಟಿವಿ ಹಕ್ಕುಗಳ ಮಾರಾಟದಿಂದ ಹಣದ ಹೊಳೆ ಹರಿಯಿತು. ಟೆನಿಸ್ ಜಗತ್ತಿನಾದ್ಯಂತ ಜನಪ್ರಿಯವಾಯಿತು. ಇದು ಮೇಲ್ಮಧ್ಯಮ ವರ್ಗದವರ ಕ್ರೀಡೆ ಎಂಬ ಭಾವನೆ ದೂರವಾಯಿತು. 1954ರಲ್ಲಿ ಅಮೆರಿಕದ ನ್ಯೂಪೋರ್ಟ್ ನಲ್ಲಿ ವಾನ್ ಅಲೆನ್ ಲಾಭದ ಅಪೇಕ್ಷೆ ಇಲ್ಲದ ಸಂಗ್ರಹಾಲಯ, ಟೆನಿಸ್ ಹಾಲ್ ಆಫ್ ಫೇಮ್ ಸ್ಥಾಪಿಸಿದರು.

ಪ್ರಾರಂಭದ ದಿನಗಳಲ್ಲಿ ಮರದ ರಾಕೆಟ್ ಗಳನ್ನು ಬಳಸುತ್ತಿದ್ದರು. ಆನಂತರ ಲೋಹ, ಕಾರ್ಬನ್ ಗ್ರಾಫೈಟ್, ಸೆರಾಮಿಕ್ಸ್, ಟೈಟಾನಿಯಂನಂಥ ಲಘು ಲೋಹಗಳ ಬಳಕೆಯಾದವು. ಈಗ ಸಿಂಥೆಟಿಕ್ ತಂತಿಗಳನ್ನು ಬಳಸುವುದರಿಂದ ಹೆಚ್ಚು ಬಾಳಿಕೆ ಬರುತ್ತಿವೆ.

ಟೆನಿಸ್ ಚೆಂಡು ಆರಂಭದಲ್ಲಿ ಬಿಳಿಯ ಬಣ್ಣದ್ದಾಗಿದ್ದವು. ದೂರದಿಂದ ಕಾಣಲು ಅನುಕೂಲವಾಗುವಂತೆ 20ನೇ ಶತಮಾನದ ಕೊನೆಯ ಭಾಗದಲ್ಲಿ ಹಳದಿ ಚೆಂಡುಗಳ ಬಳಕೆ ಆರಂಭವಾದವು.

ಟೆನಿಸ್ ಪಂದ್ಯವನ್ನು ಚೌಕಾಕಾರದ ಅಂಕಣದಲ್ಲಿ ಆಡಲಾಗುತ್ತದೆ. ಹುಲ್ಲು ಹಾಸು, ಮಣ್ಣು ಹಾಗೂ ಗಟ್ಟಿ ಅಂಕಣದಲ್ಲಿ ಟೆನಿಸ್ ಆಡಲಾಗುತ್ತದೆ. ಒಳಾಂಗಣಗಳಲ್ಲಿ ಕಾರ್ಪೆಟ್ ಹಾಸಿನ ಮೇಲೂ ಆಡಲಾಗುತ್ತದೆ. ಟೆನಿಸ್ ಕೋರ್ಟ್ 78 ಅಡಿ (23.77ಮೀ.) ಉದ್ದ ಹಾಗೂ 27 ಅಡಿ (8.3ಮೀ.) ಅಗಲವಿರುತ್ತದೆ. ಡಬಲ್ಸ್ ಪಂದ್ಯಗಳಿಗೆ ಅಗಲ 36 ಅಡಿ (10.97ಮೀ.) ಇರುತ್ತದೆ. ಕೋರ್ಟ್ ನ ಸುತ್ತ ಹೆಚ್ಚುವರಿ ಖಾಲಿ ಜಾಗ ಇರುತ್ತದೆ. ಕೋರ್ಟ್ ಎರಡು ಭಾಗವಾಗಿಸಿ ಮಧ್ಯ ಭಾಗದಲ್ಲಿ ನೆಟ್ ಕಟ್ಟಲಾಗಿರುತ್ತದೆ. ಇದು ತುದಿಗಳಲ್ಲಿ 3 ಅಡಿ 6 ಇಂಚು (1.07ಮೀ.) ಎತ್ತರ ಹಾಗೂ ನಡುವೆ 3 ಅಡಿ (91.4ಸೆಂ.ಮೀ.) ಎತ್ತರ ಇರುತ್ತದೆ. ಆಧುನಿಕ ಕೋರ್ಟ್ ನ ವಿನ್ಯಾಸ ರೂಪಿಸಿದವರು ಮೇಜರ್ ವಾಲ್ಟರ್ ಕ್ಲಾಪ್ಟನ್ ವಿಂಗ್ ಫೀಲ್ಡ. 1873ರಲ್ಲಿ. ಇದನ್ನು 1875ರಲ್ಲಿ ಈಗಿರುವಂತೆ ಮಾರ್ಪಡಿಸಲಾಯಿತು. ಟೂರ್ನಿಗಳು: ನಾಲ್ಕು ಗ್ರಾಂಡ್ ಸ್ಲಾಂ ಟೂರ್ನಿಗಳಲ್ಲದೆ, ಒಲಿಂಪಿಕ್ಸ್ ಟೆನಿಸ್, ಡೇವಿಸ್ ಕಪ್, ಫೆಡ್ ಕಪ್ ಮತ್ತು ಹಾಪ್ ಮನ್ ಕಪ್ ಟೂರ್ನಿಗಳು ಐಟಿಎಫ್ ನ ನಿಯಂತ್ರಣದಲ್ಲಿ ನಡೆಯುತ್ತವೆ. ಇದಲ್ಲದೆ ಎಟಿಪಿ ಮಾಸ್ಟರ್ಸ್ 1000 ಟೂರ್ನಿಗಳು ಪುರುಷರಿಗಾಗಿ ನಡೆಯುವ 9 ಟೂರ್ನಿಗಳ ಗೊಂಚಲು. ಇದರಲ್ಲಿ ಗೆಲ್ಲುವವರು 1000 ಶ್ರೇಯಾಂಕ ಅಂಕ ಪಡೆಯುತ್ತಾರೆ. ಈ ಎಲ್ಲಾ ಟೂರ್ನಿಗಳು ಹಾಗೂ ಗ್ರಾಂಡ್ ಸ್ಲಾಂಗಳ ಶ್ರೇಷ್ಠ ಎಂಟು ಆಟಗಾರರು ವರ್ಷಾಂತ್ಯದ ಮಾಸ್ಟರ್ಸ್ ನಲ್ಲಿ ಭಾಗವಹಿಸುತ್ತಾರೆ. ಇದಲ್ಲದೆ ವಿವಿಧ ಶ್ರೇಣಿಯ ಎಟಿಪಿ ಟೂರ್ನಿಗಳು, ಚಾಲೆಂಜರ್ಸ್ ಮತ್ತು ಐಟಿಎಫ್ ಟೂರ್ನಿಗಳು ವಿಶ್ವಾದ್ಯಂತ ವಾರ್ಷಿಕವಾಗಿ ನಡೆಯುತ್ತವೆ.

ಮಹಿಳಾ ವಿಭಾಗದಲ್ಲೂ ಕೆಲವು ಕಡ್ಡಾಯ ಟೂರ್ನಿ ಸೇರಿದಂತೆ ಹಲವು ಶ್ರೇಣಿಯ ಟೂರ್ನಿಗಳು ನಡೆಯುತ್ತವೆ. ಮಹಿಳಾ ಟೆನಿಸ್ ನಲ್ಲಿ ಶ್ರೇಣೀಕೃತ ಟೂರ್ನಿ ಪದ್ಧತಿ 1988ರಲ್ಲಿ ಆರಂಭವಾಯಿತು. ಭಾರತದಲ್ಲಿ ಪ್ರತೀ ವರ್ಷ ಜನವರಿಯಲ್ಲಿ ಚೆನ್ನೈ ಓಪನ್ ನಡೆಯುತ್ತದೆ. ಇದು ಪುರುಷರ ಟೂರ್ನಿ. ಇದಲ್ಲದೆ ಇದಲ್ಲದೆ ಕೋಲ್ಕತ್ತದಲ್ಲಿ ನಡೆಯುತ್ತಿದ್ದ ಸನ್ ಫೀಸ್ಟ್ ಓಪನ್ ಹಾಗೂ ಬೆಂಗಳೂರು ಓಪನ್ ಮಹಿಳಾ ಟೂರ್ನಿಗಳು ಹಾಗೂ ಮುಂಬೈ ಓಪನ್ ಪುರುಷರ ಟೂರ್ನಿ 2008ರಿಂದ ನಡೆಯುತ್ತಿಲ್ಲ. ಶ್ರೇಷ್ಠರು: ಆಸ್ಟ್ರೇಲಿಯಾದ ರಾಡ್ ಲೇವರ್ ಟೆನಿಸ್ ನ ಸರ್ವಶ್ರೇಷ್ಠ ಎಂದು ಪರಿಗಣಿಸಲ್ಪಟ್ಟ ಆಟಗಾರ. ಮುಕ್ತ ಯುಗದಲ್ಲಿ ಬ್ಜೋರ್ನ್ ಬೋರ್ಗ್, ಇವಾನ್ ಲೆಂಡ್ಲ್, ಜಿಮ್ಮಿ ಕಾನರ್ಸ್, ಜಾನ್ ಮೆಕೆನ್ರೋ, ಪೀಟ್ ಸಾಂಪ್ರಾಸ್, ಆಂಡ್ರೆ ಅಗಾಸ್ಸಿ ಇತ್ಯಾದಿ ಆಟಗಾರರು ಖ್ಯಾತಿ ಶಿಖರವೇರಿದ್ದಾರೆ. ಗ್ರಾಂಡ್ ಸ್ಲಾಂ ಗಳಿಕೆಯಲ್ಲಿ ಸಾರ್ವಕಾಲಿಕ ದಾಖಲೆ ನಿರ್ಮಿಸಿರುವ ರೋಜರ್ ಫೆಡರರ್, ಲೇವರ್ ಗಿಂತ ಶ್ರೇಷ್ಠನೇ ಎಂಬ ಚರ್ಚೆ ಸದ್ಯ ನಡೆಯುತ್ತಿದೆ.

ಮಹಿಳಾ ಟೆನಿಸ್ ಕ್ರಿಸ್ ಎವರ್ಟ್ , ಮಾರ್ಟಿನಾ ನವ್ರಾಟಿಲೋವ, ಸ್ಟೆಫಿ ಗ್ರಾಫ್ ರಂಥ ದಂತಕಥೆಗಳನ್ನು ಕಂಡಿದೆ. ಸದ್ಯ ಸೆರೇನಾ ವಿಲಿಯಮ್ಸ್ ಮುಂಚೂಣಿಯಲ್ಲಿದ್ದಾರೆ. ಭಾರತ ಟೆನಿಸ್ ಗೆ ರಾಮನಾಥನ್ ಕೃಷ್ಣನ್, ವಿಜಯ್ ಅಮೃತ್ ರಾಜ್, ರಮೇಶ್ ಕೃಷ್ಣನ್,

ಲಿಯಾಂಡರ್ ಪೇಸ್, ಮಹೇಶ್ ಭೂಪತಿಯಂಥ ಅಪ್ರತಿಮ ಸಾಧಕರನ್ನು ಕೊಡುಗೆ ನೀಡಿದೆ. ಮಹಿಳಾ ಟೆನಿಸ್ ನಲ್ಲಿ ಸಾನಿಯಾ ಮಿರ್ಜಾ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಏಕೈಕ ಪ್ರತಿನಿಧಿ.